ಫ್ರೀಡಂ ನ್ಯೂಸ್

# ಪೊಲೀಸರಿಗೆ ನರಕ ತಪ್ಪಿಸಿದ DG IGP ಸಲೀಂ

**ಬೆಂಗಳೂರು: ದಶಕಗಳ ಕಾಲದಿಂದ ಚಾಲ್ತಿಯಲ್ಲಿದ್ದ ವಿವಾದಾತ್ಮಕ 'ಆರ್ಡರ್ಲಿ' ಪದ್ಧತಿಗೆ ಕೊನೆಗೂ ಬ್ರೇಕ್ ಬಿದ್ದಿದೆ! ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ ಉನ್ನತ ಹುದ್ದೆಯಲ್ಲಿರುವ ಐಪಿಎಸ್ ಅಧಿಕಾರಿಗಳ ಮನೆಯಲ್ಲಿ ಇನ್ಮುಂದೆ ಪೊಲೀಸ್ ಕಾನ್‌ಸ್ಟೆಬಲ್‌ಗಳು ಅಡುಗೆ ಮಾಡುವುದು ಅಥವಾ ತರಕಾರಿ ತರುವ ಕೆಲಸ ಮಾಡುವಂತಿಲ್ಲ. ಬ್ರಿಟಿಷ್ ಕಾಲದ ಈ ಗುಲಾಮಗಿರಿ ಪದ್ಧತಿಯನ್ನು ಅಂತ್ಯಗೊಳಿಸಲು ಗೃಹ ಇಲಾಖೆ ಈಗ ಐತಿಹಾಸಿಕ ಪರ್ಯಾಯ ವ್ಯವಸ್ಥೆಯನ್ನು ಜಾರಿಗೆ ತಂದಿದೆ!**

**ಖಾಕಿ ಪಡೆಗೆ ರಿಲೀಫ್: ಹೋಮ್ ಗಾರ್ಡ್ಸ್‌ಗೆ ಎಂಟ್ರಿ!**

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾದ ಶಿಸ್ತಿನ ಸಿಪಾಯಿಗಳನ್ನು ಅಧಿಕಾರಿಗಳ ಮನೆಗೆಲಸಕ್ಕೆ ಬಳಸಿಕೊಳ್ಳುವುದು ಸರಿಯಲ್ಲ ಎಂಬ ವ್ಯಾಪಕ ಟೀಕೆಗಳ ಬೆನ್ನಲ್ಲೇ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಅವರು ಈ ಕ್ರಾಂತಿಕಾರಿ ಆದೇಶ ಹೊರಡಿಸಿದ್ದಾರೆ. ಹೊಸ ನಿಯಮದ ಪ್ರಕಾರ, ಡಿಜಿಪಿ-ಐಜಿಪಿ ಹಂತದ ಅಧಿಕಾರಿಗಳಿಂದ ಹಿಡಿದು ಎಸ್ಪಿಗಳವರೆಗೆ ಒಟ್ಟು 373 ಸಹಾಯಕರನ್ನು ನೇಮಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಆದರೆ, ಇನ್ನು ಮುಂದೆ ಈ ಸ್ಥಾನಕ್ಕೆ ಪೊಲೀಸರ ಬದಲಾಗಿ ಹೋಮ್ ಗಾರ್ಡ್ಸ್ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ಬಳಸಿಕೊಳ್ಳುವುದು ಕಡ್ಡಾಯವಾಗಿದೆ!

**ಅಡುಗೆ, ಶಾಪಿಂಗ್ ಜಮಾನಾ ಬಂದ್:**

ಸರ್ಕಾರದಿಂದ ಕಟ್ಟುನಿಟ್ಟಿನ ಸೂಚನೆ! ಅರ್ಜಿದಾರರು ಅಥವಾ ಸಾರ್ವಜನಿಕರ ಹಿತ ಕಾಯಬೇಕಾದ ಪೊಲೀಸರು ಅಧಿಕಾರಿಗಳ ಮಕ್ಕಳನ್ನು ಶಾಲೆಗೆ ಬಿಡುವುದು, ಕುಟುಂಬದ ಸದಸ್ಯರ ಜೊತೆ ಶಾಪಿಂಗ್ ಹೋಗುವುದು ಸೇರಿದಂತೆ ಎಲ್ಲಾ ರೀತಿಯ ಮನೆಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ಈ ವ್ಯವಸ್ಥೆಯಿಂದಾಗಿ ಪೊಲೀಸ್ ಇಲಾಖೆಯ ಘನತೆಗೆ ಧಕ್ಕೆಯಾಗುತ್ತಿತ್ತು. ಈಗ ಜಾರಿಯಾಗಿರುವ ಆದೇಶದಂತೆ, ಅನುಯಾಯಿಗಳ ಅಗತ್ಯವಿಲ್ಲದ ಅಧಿಕಾರಿಗಳು ನಿಗದಿತ ಹೊರಗುತ್ತಿಗೆ ಸಿಬ್ಬಂದಿಯನ್ನು ನೇಮಿಸಿಕೊಂಡು ಸರ್ಕಾರದಿಂದ 'ಆರ್ಡರ್ಲಿ ಭತ್ಯೆ' ಪಡೆಯಬಹುದಾಗಿದೆ. ಒಟ್ಟಿನಲ್ಲಿ, ಪೊಲೀಸರನ್ನು ಅಸಲಿ ಕರ್ತವ್ಯಕ್ಕೆ ಮರಳಿಸುವ ನಿಟ್ಟಿನಲ್ಲಿ ಗೃಹ ಇಲಾಖೆಯ ಈ ನಡೆ ಇಡೀ ಪೊಲೀಸ್ ಪಡೆಯಲ್ಲಿ ಹೊಸ ಆಶಾವಾದ ಮೂಡಿಸಿದೆ!



**ಖಾಕಿ ಘನತೆ ಉಳಿಸಲು ಗೃಹ ಇಲಾಖೆ ಮಾಸ್ಟರ್ ಪ್ಲಾನ್!**

ಈ ಹೊಸ ಆದೇಶದ ಪ್ರಕಾರ, ಡಿಜಿಪಿ-ಐಜಿಪಿ ಹಂತದ ಅಧಿಕಾರಿಗಳಿಂದ ಹಿಡಿದು ಜಿಲ್ಲಾ ಎಸ್ಪಿಗಳವರೆಗೆ ಒಟ್ಟು 373 ಸಹಾಯಕರನ್ನು ನೇಮಿಸಿಕೊಳ್ಳಲು ಅವಕಾಶವಿದ್ದರೂ, ಅಲ್ಲಿ ಅಪ್ಪಿತಪ್ಪಿಯೂ ಪೊಲೀಸ್ ಕಾನ್‌ಸ್ಟೆಬಲ್‌ಗಳು ಕಾಣಿಸಿಕೊಳ್ಳುವಂತಿಲ್ಲ. ಒಂದು ವೇಳೆ ಅಧಿಕಾರಿಗಳಿಗೆ ಹೊರಗುತ್ತಿಗೆ ಸಿಬ್ಬಂದಿ ಬೇಡವೆಂದಾದಲ್ಲಿ, ಅವರು ನಿಗದಿಪಡಿಸಿದ 'ಆರ್ಡರ್ಲಿ ಭತ್ಯೆ'ಯನ್ನು ನೇರವಾಗಿ ಪಡೆಯಬಹುದಾಗಿದೆ. ಈ ಐತಿಹಾಸಿಕ ಬದಲಾವಣೆಯಿಂದಾಗಿ ಸಾವಿರಾರು ಪೊಲೀಸ್ ಸಿಬ್ಬಂದಿ ಮತ್ತೆ ತಮ್ಮ ಅಸಲಿ ಕರ್ತವ್ಯಕ್ಕೆ ಮರಳುವಂತಾಗಿದ್ದು, ಇಲಾಖೆಯ ಘನತೆಯನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಇದೊಂದು ಕ್ರಾಂತಿಕಾರಿ ನಿರ್ಧಾರ ಎಂದು ವಿಶ್ಲೇಷಿಸಲಾಗುತ್ತಿದೆ!



ಎಲ್. ಎಂ. ನಾಗರಾಜು
ಪ್ರಧಾನ ಸಂಪಾದಕರು

ಸಂಪಾದಕೀಯ

# ಮೀಸಲಾತಿ ಹೋರಾಟದ ಸ್ವಾಮೀಜಿಯ ದುರಂತ ಕತೆ

ಸ್ವಾಮೀಜಿ ಯೊಬ್ಬರು ತಮ್ಮ ಜಟೆ-ಗೆರೆಗಳ ಹಿಂದೆ ಮಹಿಳೆಯೊಬ್ಬಳನ್ನು ಇಟ್ಟುಕೊಂಡು ಆಡಿದ್ದ ಗುಪ್ತ ಆಟ ಇದೀಗ ಬಯಲಾಗಿದೆ. ಈಗ ಆಕೆ ತಿರುಗಿಬಿದ್ದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾಳೆ, ರಾಜಿ ಸಂಧಾನದಲ್ಲಿ ಶ್ರೀಗೆ ಹೊಡೆದಿದ್ದಾರೆ, ಜೀವನ ಭದ್ರತೆ ಎಂದು ದೊಡ್ಡ ಹಣ ಕೇಳುತ್ತಿದ್ದಾಳೆ. ಇದು ಕೇವಲ ಒಬ್ಬ ಗುರು-ಶಿಷ್ಯೆಯ ಗಲಾಟೆಯಲ್ಲ; ಇದು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಒಂದು ಕೊಳಕು ರಾಜಕೀಯ ಬೇಟೆ. ಮೀಸಲಾತಿ ಹೋರಾಟದಲ್ಲಿ ಸಮುದಾಯವನ್ನು ಮುನ್ನಡೆಸಿದ್ದ ಈ ಸ್ವಾಮೀಜಿಯನ್ನು ಇನ್ನಿಲ್ಲದಂತೆ ಕಾಡುವ ರಾಜಕಾರಣಿಗಳು, ಮೀಡಿಯಾ ಹೈನಗಳು – ಎಲ್ಲರೂ ಶ್ರೀ ಪಾಲಿಗೆ ರಣಹದ್ದುಗಳಾಗಿದ್ದಾರೆ.

ಗುರು ದೇವರ ಸ್ಥಾನ ಎಂದು ಹೇಳಿಕೊಂಡು ಇಂದ್ರಿಯದಾಸನಾಗಿ ಭಕ್ತರ ನಂಬಿಕೆಯನ್ನು ತುಳಿದರೆ ಅದು ಧರ್ಮದ ಅಪಚಾರವಲ್ಲದೆ ಮತ್ತೇನು? ಒಂದು ಕಡೆ ಸ್ವಾಮೀಜಿ ತಮ್ಮ ತಪ್ಪನ್ನು ಒಪ್ಪದೆ ಮುಖ ಮರೆಸಿಕೊಳ್ಳುತ್ತಿದ್ದರೆ, ಮಹಿಳೆಯೂ ಹಲವು ವರ್ಷ ಗುಪ್ತವಾಗಿ ಸಂಬಂಧ ಬೆಳೆಸಿ ಈಗ ವಿಡಿಯೋ-ಆಡಿಯೋ ಬಿಟ್ಟು ಹಣದ ಗಾಳಿ ಹಿಡಿಯುತ್ತಿದ್ದಾಳೆ. ಎರಡೂ ಕಡೆಯೂ ನೈತಿಕತೆಯ ಬಟ್ಟೆ ಕಳಚಿಹೋಗಿದೆ. ಧರ್ಮದ ಹೆಸರಿನಲ್ಲಿ ಇಂತಹ ಕೊಳಕು ಒಡಂಬಡಿಕೆಗಳು ನಡೆದರೆ ಸಮಾಜದ ನಂಬಿಕೆ ಏನಾಗುತ್ತದೆ? ಕಲ್ಲು ಕರಗುವ ಸಮಯ ಬಂದಿದೆಯೇ?

ಕಾನೂನು ಎಲ್ಲಿ ಹೋಯಿತು? ಬ್ಲ್ಯಾಕ್‌ಮೇಲ್, ಹಲ್ಲೆ, ಬೆದರಿಕೆ – ಇವೆಲ್ಲಾ IPCಯ 384, 506, 420ರಡಿ ನೇರ ಅಪರಾಧ. ಆದರೆ ಯಾರೂ ಪೊಲೀಸ್ ಬಾಗಿಲು ತಟ್ಟದೆ ಖಾಸಗಿ ರಾಜಿ ಮಾಡಿ ಹಣದ ಮೂಲಕ 'ಪರಿಹಾರ' ಹುಡುಕುತ್ತಿದ್ದಾರೆ. ಇದು ಕಾನೂನಿನ ಗೇಲಿ ಅಲ್ಲದೆ ಮತ್ತೇನು? ಸಮಾಜ ಇದನ್ನು ಸುಮ್ಮನೆ ನೋಡಬೇಕೇ? ಎಲ್ಲರೂ ತಕ್ಷಣ ದೂರು ಕೊಟ್ಟು ಸತ್ಯವನ್ನು ಬೆಳಕಿಗೆ ತರಲಿ.

ಇದು ವೈಯಕ್ತಿಕ ವಿಷಯವಲ್ಲ – ಮೀಸಲಾತಿ ಹೋರಾಟದ ನಾಯಕನನ್ನು ಮುಗಿಸಲು ರಾಜಕಾರಣಿಗಳು ಈ ಅವಕಾಶವನ್ನು ಬಳಸಿಕೊಂಡಿದ್ದಾರೆ. ಸಮುದಾಯದ ನಾಯಕತ್ವವನ್ನು ದುರ್ಬಲಗೊಳಿಸಿ, ಏಕತೆಯನ್ನು ಒಡೆದು ತಮ್ಮ ರಾಜಕೀಯ ಲಾಭಕ್ಕೆ ಉಪಯೋಗಿಸುತ್ತಿದ್ದಾರೆ. ಹಲವರು'ಹೈನಗಳಂತೆ' ಕಾದುಕೂತು ಹಲ್ಲು ಮಸೆಯುತ್ತಿದ್ದಾರೆ . ಇದು ಆ ಸಮಾಜದ ಏಕತೆಗೆ ಮಾಡುತ್ತಿರುವ ದೊಡ್ಡ ದ್ರೋಹ.
ಸ್ವಾಮೀಜಿ ತಕ್ಷಣ ಪೊಲೀಸ್‌ಗೆ ದೂರು ನೀಡಿ ಬ್ಲ್ಯಾಕ್‌ಮೇಲ್, ಹಲ್ಲೆ ಮತ್ತು ಬೆದರಿಕೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ತಪ್ಪನ್ನು ಒಪ್ಪಿಕೊಂಡು ಭಕ್ತರ ಮುಂದೆ ಕ್ಷಮೆಕೇಳಬೇಕು. ಆ ಮಹಿಳೆಯೂ ತನಗೆ ನಿಜಕ್ಕೂ ಅನ್ಯಾಯ ಆಗಿದ್ದರೆ ಕಾನೂನಿನ ಮೊರೆಹೋಗಬೇಕೆ ಹೊರೆತು ಸೆಟಲ್ಮೆಂಟ್ ನ್ಯಾಯದ ಮೊರೆ ಹೋಗಬಾರದು.

**-ಫ್ರೀಡಂ ಟಿವಿ**

# ಬಿಡಿಎ ಅಧಿಕಾರಿಗಳಿಗೆ ಶಾಕ್: ಮಾಹಿತಿ ಆಯೋಗದಿಂದ ಲಕ್ಷ ಲಕ್ಷ ದಂಡದ ಬರೆ!




**ಬೆಂಗಳೂರು:** ಆರ್‌ಟಿಐ ಅರ್ಜಿಗಳನ್ನು ಕಸದ ಬುಟ್ಟಿಗೆ ಎಸೆಯುತ್ತಿದ್ದ ಬಿಡಿಎ ಅಧಿಕಾರಿಗಳಿಗೆ ಕರ್ನಾಟಕ ಮಾಹಿತಿ ಆಯೋಗ ಈಗ ಸಿಂಹಸ್ವಪ್ನವಾಗಿ ಪರಿಣಮಿಸಿದೆ! ಚಾಳಿ ಬಿಡದ ಅಧಿಕಾರಿಗಳಿಗೆ ಚಳಿ ಬಿಡಿಸಿರುವ ಆಯೋಗವು, ಇಬ್ಬರು ಅಧಿಕಾರಿಗಳಿಗೆ ಬರೋಬ್ಬರಿ 1.25 ಲಕ್ಷ ರೂಪಾಯಿ ದಂಡ ವಿಧಿಸುವ ಮೂಲಕ ಭ್ರಷ್ಟ ಹಾಗೂ ನಿರ್ಲಕ್ಷ್ಯದ ವ್ಯವಸ್ಥೆಗೆ ಬಿಸಿ ಮುಟ್ಟಿಸಿದೆ!

**ದಂಡದ ಸುರಿಮಳೆ: ಬಿಡಿಎ ಬಾಬುಗಳಿಗೆ ನಡುಕ!**

ಮಾಹಿತಿ ಹಕ್ಕು ಕಾಯ್ದೆಯಡಿ ವಿವರ ಕೋರಿದ್ದ ಅರ್ಜಿದಾರರಿಗೆ ಕಿಂಚಿತ್ತೂ ಗೌರವ ನೀಡದೆ, ಮಾಹಿತಿ ನೀಡಲು ಸತಾಯಿಸುತ್ತಿದ್ದ ಬಿಡಿಎ ಉಪಕಾರ್ಯದರ್ಶಿ ಉಮೇಶ್ ಅವರಿಗೆ ಆಯೋಗವು ಚೇತರಿಸಿಕೊಳ್ಳಲಾಗದ ಪೆಟ್ಟು ನೀಡಿದೆ. ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ತಲಾ 25 ಸಾವಿರ ರೂಪಾಯಿಯಂತೆ ಒಟ್ಟು 1 ಲಕ್ಷ ರೂಪಾಯಿ ದಂಡ ವಿಧಿಸಲಾಗಿದ್ದು, ಇಷ್ಟಾದರೂ ಮಾಹಿತಿ ನೀಡದಿದ್ದರೆ ಶಿಸ್ತು ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಆಯೋಗವು ಎಚ್ಚರಿಕೆ ನೀಡಿದೆ! ಸುಪ್ರೀಂಕೋರ್ಟ್ ಆದೇಶದಂತೆ ಪ್ರತಿ ಇಲಾಖೆಯು ತನ್ನ ಮಾಹಿತಿಗಳನ್ನು ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕಿದ್ದರೂ, ಉಮೇಶ್ ಅವರು ತೋರಿದ ಬೇಜವಾಬ್ದಾರಿತನಕ್ಕೆ ಈಗ ಲಕ್ಷದ ಬರೆ ಬಿದ್ದಿದೆ.

**ಶಿವಕುಮಾರ್‌ಗೂ ತಪ್ಪದ ಶಿಕ್ಷೆ: ಶಿಸ್ತು ಕ್ರಮದ ಭೀತಿ!**

ಇನ್ನೊಂದೆಡೆ ಬಿಡಿಎ ಕಾರ್ಯದರ್ಶಿ ಶಿವಕುಮಾರ್ ಅವರು ಕೂಡ ಮಾಹಿತಿ ನೀಡುವಲ್ಲಿ ವಿಫಲರಾಗಿದ್ದು, ಅವರಿಗೂ 25 ಸಾವಿರ ರೂಪಾಯಿ ದಂಡ ವಿಧಿಸಿ ಆಯೋಗವು ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಸುರೇಶ್ ಚಂದ್ರ ಬಾಬು ಎಂಬುವರು ಕೇಳಿದ್ದ ಸರ್ಕಾರದ ಆದೇಶದ ಪ್ರತಿಯನ್ನು ನೀಡದೆ ಕಾಲಹರಣ ಮಾಡಿದ ಶಿವಕುಮಾರ್ ವಿರುದ್ಧ ಈಗ ಸರ್ಕಾರಕ್ಕೆ ದೂರು ನೀಡಲು ಆಯೋಗ ಸಜ್ಜಾಗಿದೆ. ತಕ್ಷಕ್, ತನ್ವಿತಾ ಗೌರ್ ಸೇರಿದಂತೆ ಹಲವು ಅರ್ಜಿದಾರರ ನಿರಂತರ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಂತಾಗಿದ್ದು, ಕಡತಗಳನ್ನು ಮುಚ್ಚಿಟ್ಟು ಕುಳಿತಿರುವ ಇತರೆ ಅಧಿಕಾರಿಗಳ ಎದೆಯಲ್ಲಿ ಈಗ ದಂಡದ ಭೀತಿ ಶುರುವಾಗಿದೆ!

# ಪತ್ರಕರ್ತನ ಹತ್ಯೆ; ರಾಮ್ ರಹೀಮ್ ಖುಲಾಸೆ

**ಬೆಂಗಳೂರು:** ಸುಮಾರು 24 ವರ್ಷಗಳ ಹಿಂದಿನ ಪತ್ರಕರ್ತ ರಾಮ್ ಚಂದರ್ ಛತ್ರಪತಿ ಹತ್ಯೆ ಪ್ರಕರಣದಲ್ಲಿ ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್‌ಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಶನಿವಾರ (ಮಾರ್ಚ್ 7, 2026) ದೊಡ್ಡ ಮಟ್ಟದ ಕಾನೂನು ಜಯ ನೀಡಿದೆ. 2019ರಲ್ಲಿ ಸಿಬಿಐ ವಿಶೇಷ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ರದ್ದುಗೊಳಿಸಿರುವ ಹೈಕೋರ್ಟ್, ಸಾಕ್ಷ್ಯಾಧಾರಗಳ ಕೊರತೆಯ ಹಿನ್ನೆಲೆಯಲ್ಲಿ ರಾಮ್ ರಹೀಮ್‌ನನ್ನು ಈ ಕೊಲೆ ಪ್ರಕರಣದಿಂದ ಸಂಪೂರ್ಣವಾಗಿ ಖುಲಾಸೆಗೊಳಿಸಿ ಆದೇಶಿಸಿದೆ!



**ಏನಿದು ಪ್ರಕರಣ? ಪತ್ರಕರ್ತನ ಹತ್ಯೆಯಾಗಿದ್ದು ಏಕೆ?**

2002ರಲ್ಲಿ ಸಿರ್ಸಾದಲ್ಲಿ ಪತ್ರಕರ್ತ ರಾಮ್ ಚಂದರ್ ಛತ್ರಪತಿ ಅವರು ತಮ್ಮ 'ಪೂರಾ ಸಚ್' ಪತ್ರಿಕೆಯಲ್ಲಿ ಡೇರಾ ಮುಖ್ಯಸ್ಥನಿಂದ ಮಹಿಳಾ ಅನುಯಾಯಿಗಳ ಮೇಲೆ ನಡೆಯುತ್ತಿದ್ದ ಲೈಂಗಿಕ ದೌರ್ಜನ್ಯದ ಬಗ್ಗೆ ಅನಾಮಧೇಯ ಪತ್ರವೊಂದನ್ನು ಪ್ರಕಟಿಸಿದ್ದರು. ಈ ವರದಿ ಪ್ರಕಟವಾದ ಕೆಲವೇ ದಿನಗಳಲ್ಲಿ, ಅಕ್ಟೋಬರ್ 2002ರಲ್ಲಿ ಛತ್ರಪತಿ ಅವರ ಮೇಲೆ ಗುಂಡಿನ ದಾಳಿ ನಡೆದಿತ್ತು. ತೀವ್ರವಾಗಿ ಗಾಯಗೊಂಡಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು. ಈ ಹತ್ಯೆಯ ಹಿಂದೆ ರಾಮ್ ರಹೀಮ್ ಸಂಚು ರೂಪಿಸಿದ್ದಾನೆ ಎಂಬ ಆರೋಪದ ಮೇಲೆ 2019ರಲ್ಲಿ ಸಿಬಿಐ ನ್ಯಾಯಾಲಯ ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಆದರೆ, ಈಗ ಹೈಕೋರ್ಟ್ ಈ ತೀರ್ಪನ್ನು ಬದಲಿಸಿ ರಾಮ್ ರಹೀಮ್‌ನನ್ನು ಆರೋಪಮುಕ್ತಗೊಳಿಸಿದೆ.

**ಖುಲಾಸೆಯಾದರೂ ಜೈಲಿನಲ್ಲೇ ಇರಲಿರುವ ಡೇರಾ ಮುಖ್ಯಸ್ಥ!**

ಹತ್ಯೆ ಪ್ರಕರಣದಲ್ಲಿ ಖುಲಾಸೆಯಾಗಿದ್ದರೂ ರಾಮ್ ರಹೀಮ್ ಸದ್ಯಕ್ಕೆ ಜೈಲಿನಿಂದ ಹೊರಬರುವಂತಿಲ್ಲ. ಇಬ್ಬರು ಸಾಧ್ವಿಯರ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಆತ ಈಗಾಗಲೇ 20 ವರ್ಷಗಳ ಜೈಲು ಶಿಕ್ಷೆ ಅನುಭವಿಸುತ್ತಿದ್ದು, ರೋಹ್ಟಕ್‌ನ ಸುನಾರಿಯಾ ಜೈಲಿನಲ್ಲಿ ಬಂಧಿಯಾಗಿದ್ದಾನೆ. ಇನ್ನು ಹೈಕೋರ್ಟ್ ತೀರ್ಪಿನಿಂದ ಆಘಾತಕ್ಕೊಳಗಾಗಿರುವ ಮೃತ ಪತ್ರಕರ್ತನ ಪುತ್ರ ಅಂಶುಲ್ ಛತ್ರಪತಿ, ಈ ನಿರ್ಧಾರವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ತಿಳಿಸಿದ್ದಾರೆ. ಈ ಮೂಲಕ ಕಳೆದ ಎರಡು ದಶಕಗಳಿಂದ ನಡೆಯುತ್ತಿರುವ ಕಾನೂನು ಸಮರ ಈಗ ದೇಶದ ಅತ್ಯುನ್ನತ ನ್ಯಾಯಾಲಯದ ಮೆಟ್ಟಿಲೇರಲು ಸಜ್ಜಾಗಿದೆ!

# ಸೈಬರ್ ಅಪರಾಧಿಗಳಿಗೆ ಪರಮೇಶ್ವರ್ ವಾರ್ನಿಂಗ್:

## ಡಿಜಿಟಲ್ ಲೋಕದ ರಕ್ಷಣೆಗೆ ಕರ್ನಾಟಕ ಸಜ್ಜು!






**ಬೆಂಗಳೂರು:** ಸಿಲಿಕಾನ್ ಸಿಟಿ ಬೆಂಗಳೂರು ಇನ್ನುಂದೆ ಕೇವಲ ಐಟಿ ಹಬ್ ಮಾತ್ರವಲ್ಲ, ವಿಶ್ವದ ಅತ್ಯಂತ ಸುರಕ್ಷಿತ ಡಿಜಿಟಲ್ ತಾಣವಾಗಲಿದೆ! ಸೈಬರ್ ವಂಚಕರ ಜಾಲವನ್ನು ಬುಡಸಮೇತ ಕಿತ್ತೆಸೆಯಲು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಈಗ ಮಾಸ್ಟರ್ ಪ್ಲಾನ್ ಬಿಚ್ಚಿಟ್ಟಿದ್ದಾರೆ. ನಗರದ 'CIDECODE' ಸೈಬರ್ ಶೃಂಗಸಭೆಯಲ್ಲಿ ಮಾತನಾಡಿದ ಅವರು, ಗಡಿಗಳಿಲ್ಲದ ಸೈಬರ್ ಅಪರಾಧಗಳನ್ನು ಮಟ್ಟಹಾಕಲು ತಂತ್ರಜ್ಞಾನ ಮತ್ತು ಕಟ್ಟುನಿಟ್ಟಿನ ಕಾನೂನುಗಳೇ ನಮ್ಮ ಅಸ್ತ್ರ ಎಂದು ಗುಡುಗಿದ್ದಾರೆ!

**43 ಸಿಇಎನ್ ಪೊಲೀಸ್ ಠಾಣೆಗಳ ಭದ್ರಕೋಟೆ!**

ರಾಜ್ಯದ ಪ್ರತಿಯೊಂದು ಜಿಲ್ಲೆ ಹಾಗೂ ಪ್ರಮುಖ ನಗರಗಳಲ್ಲಿ ಒಟ್ಟು 43 ಸಿಇಎನ್ (CEN) ಪೊಲೀಸ್ ಠಾಣೆಗಳನ್ನು ಸ್ಥಾಪಿಸುವ ಮೂಲಕ ಸರ್ಕಾರ ಸೈಬರ್ ಕ್ರಿಮಿನಲ್‌ಗಳಿಗೆ ಬಿಸಿ ಮುಟ್ಟಿಸಿದೆ. ಕೇವಲ ಠಾಣೆಗಳ ಸ್ಥಾಪನೆಯಷ್ಟೇ ಅಲ್ಲದೆ, ಡಾರ್ಕ್‌ವೆಬ್ ಚಟುವಟಿಕೆಗಳು, ಕ್ರಿಪ್ಟೋಕರೆನ್ಸಿ ಟ್ರ್ಯಾಕಿಂಗ್ ಹಾಗೂ ಹಣಕಾಸು ವಂಚನೆಗಳನ್ನು ಪತ್ತೆಹಚ್ಚಲು ಅತ್ಯಾಧುನಿಕ ಡಿಜಿಟಲ್ ಫೋರೆನ್ಸಿಕ್ ಪ್ರಯೋಗಾಲಯಗಳನ್ನು ಬಲಪಡಿಸಲಾಗಿದೆ. ಈ ಮೂಲಕ ತಂತ್ರಜ್ಞಾನ ಆಧಾರಿತ ಅಪರಾಧಗಳಿಗೆ ತಂತ್ರಜ್ಞಾನದ ಮೂಲಕವೇ ತಿರುಗೇಟು ನೀಡಲು ಪೊಲೀಸ್ ಇಲಾಖೆ ಸಂಪೂರ್ಣ ಸಜ್ಜಾಗಿದೆ!

**62 ಸಾವಿರ ಪೊಲೀಸರಿಗೆ ಹೈಟೆಕ್ ತರಬೇತಿ!**

ಸೈಬರ್ ಅಪರಾಧ ತನಿಖೆಯನ್ನು ಬಲಪಡಿಸಲು ರಾಜ್ಯದ ಸುಮಾರು 62 ಸಾವಿರಕ್ಕೂ ಹೆಚ್ಚು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸುಧಾರಿತ ತಾಂತ್ರಿಕ ಕೌಶಲ್ಯಗಳ ತರಬೇತಿ ನೀಡಲಾಗಿದೆ. ಕೃತಕ ಬುದ್ಧಿಮತ್ತೆ (AI) ಮತ್ತು ಕ್ಲೌಡ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಖಾಸಗಿ ಕಂಪನಿಗಳೊಂದಿಗೆ ಕೈಜೋಡಿಸಿರುವ ಸರ್ಕಾರ, ಸೈಬರ್ ಸುರಕ್ಷತೆಯ ಹೊಸ ಪರಿಸರ ವ್ಯವಸ್ಥೆಯನ್ನು ನಿರ್ಮಿಸುತ್ತಿದೆ. ಅಂತರರಾಷ್ಟ್ರೀಯ ಸಂಸ್ಥೆಗಳ ಸಹಯೋಗದೊಂದಿಗೆ ನಾಗರಿಕರ ಪ್ರತಿಯೊಂದು ಡಿಜಿಟಲ್ ಹೆಜ್ಜೆಯೂ ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು ನಮ್ಮ ಬದ್ಧತೆ ಎಂದು ಪರಮೇಶ್ವರ್ ಭರವಸೆ ನೀಡಿದ್ದಾರೆ!

# ಬಂದೂಕು ಹಿಡಿಯುವ ಕೈಗಳಲ್ಲಿ ಅರಳಿದ ರಂಗೋಲಿ ಚಿತ್ತಾರ! ಮಹಿಳಾ ಪೊಲೀಸರ ಕಲಾ ವೈಭವ!

**ತುಮಕೂರು:** ಪ್ರತಿನಿತ್ಯ ಅಪರಾಧ ಲೋಕದ ತನಿಖೆ, ಲಾಠಿ ಮತ್ತು ಬಂದೂಕುಗಳ ಜೊತೆ ಸೆಣಸಾಡುವ ಮಹಿಳಾ ಪೊಲೀಸರು ಇಂದು ಬಣ್ಣ ಬಣ್ಣದ ರಂಗೋಲಿಗಳ ಜೊತೆ ತಮ್ಮ ಸೃಜನಶೀಲತೆ ಮೆರೆದಿದ್ದಾರೆ! ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ತುಮಕೂರು ಜಿಲ್ಲಾ ಪೊಲೀಸ್ ಇಲಾಖೆ ಆಯೋಜಿಸಿದ್ದ ವಿಶೇಷ ರಂಗೋಲಿ ಸ್ಪರ್ಧೆಯು ಖಾಕಿ ಪಡೆಯ ಕಲಾತ್ಮಕ ಮುಖವನ್ನು ಅನಾವರಣಗೊಳಿಸಿದೆ. ಎಸ್‌ಪಿ ಕಚೇರಿ ಆವರಣದಲ್ಲಿ ನಡೆದ ಈ ಸಂಭ್ರಮದಲ್ಲಿ 50ಕ್ಕೂ ಹೆಚ್ಚು ಮಹಿಳಾ ಸಿಬ್ಬಂದಿ ಭಾಗವಹಿಸಿ, ಒತ್ತಡದ ಕೆಲಸದಿಂದ ತುಸು ವಿರಾಮ ಪಡೆದು ಸಂಭ್ರಮಿಸಿದರು!



